# ಕೃಷಿ ಉತ್ಪನ್ನ ಉಪಕರ ಅಧಿನಿಯಮ, 1940

04.05.2006ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 33ನೇ ಸಂಪುಟದ 1ನೇ ಸಂಚಿಕೆಯಲ್ಲಿ 67 ರಿಂದ 69ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು**


1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಉಪಕರ ವಿಧಿಸುವುದು
4. ಅನುಸೂಚಿಯಿಂದ ವಸ್ತುಗಳನ್ನು ಹೊರತುಪಡಿಸುವ ಅಧಿಕಾರ
5. ಉಪಕರದ ಮರುಪಾವತಿ ಮತ್ತು ಅದರಿಂದ ವಿನಾಯಿತಿ

5ಎ. ಸೀಮಾಸುಂಕ ಅಧಿನಿಯಮ, 1962ರ ಕೆಲವು ಉಪಬಂಧಗಳನ್ನು ಅನ್ವಯಿಸುವುದು

5ಬಿ. ದಂಡನೆಗಳು

6. ಪರಿಷತ್ತಿಗೆ ಉಪಕರವನ್ನು ಸಂದಾಯ ಮಾಡುವುದು ಮತ್ತು ಪರಿಷತ್ತಿನಿಂದ ಅಂಥ ಉಪಕರದ ವೆಚ್ಚ
7. ಸ್ಥಾಯೀ ಹಣಕಾಸು ಸಮಿತಿ
8. ಮೀಸಲು ನಿಧಿ
9. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ
10. ಅನುಸೂಚಿ

# ಕೃಷಿ ಉತ್ಪನ್ನ ಉಪಕರ ಅಧಿನಿಯಮ, 1940

[1940ರ ಅಧಿನಿಯಮ ಸಂಖ್ಯೆ 27]

[ಏಪ್ರಿಲ್ 15, 1940]

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿಗೆ ಉತ್ತಮವಾದ ಹಣಕಾಸು ವ್ಯವಸ್ಥೆಯನ್ನು ಕಲ್ಪಿಸುವ ಅಧಿನಿಯಮ.

ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ಆ ನಿಕಾಯದ ಸಂಸ್ಥಾಪನಾ ಪತ್ರದಲ್ಲಿ ತಿಳಿಸಿರುವಂತೆ ಯಾವ ಉದ್ದೇಶಗಳಿಗಾಗಿ ಸ್ಥಾಪಿತವಾಗಿದೆಯೋ ಅವುಗಳ ಈಡೇರಿಕೆಗಾಗಿ ಅದಕ್ಕೆ ಉತ್ತಮವಾದ ಹಣಕಾಸು ವ್ಯವಸ್ಥೆಯನ್ನು ಒದಗಿಸುವುದು ಮತ್ತು ಈ ಉದ್ದೇಶಕ್ಕಾಗಿ ಕೆಲವು ವಸ್ತುಗಳ ರಫ್ತಿನ ಮೇಲೆ ಸೀಮಾ ಸುಂಕವಾಗಿ ಉಪಕರವನ್ನು ವಿಧಿಸುವುದು ಮತ್ತು ಅದರಿಂದ ಬಂದ ಉತ್ಪನ್ನವನ್ನು ಸದರಿ ಪರಿಷತ್ತಿಗೆ ಸಂದಾಯ ಮಾಡುವುದು ಯುಕ್ತವಾಗಿರುವುದರಿಂದ;

ಇದು ಈ ಮೂಲಕ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ಕೃಷಿ ಉತ್ಪನ್ನ ಉಪಕರ ಅಧಿನಿಯಮ, 1940 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಕಮೀಷನರ್" ಎಂದರೆ ಸೀಮಾ ಸುಂಕ ಅಧಿನಿಯಮ, 1962 (1962ರ 52)ರ 2ನೇ ಪ್ರಕರಣದ (8)ನೇ ಖಂಡದಲ್ಲಿ ಪರಿಭಾಷಿಸಿರುವ ಸೀಮಾಸುಂಕದ ಕಮೀಷನರು;

(ಬಿ) "ಪರಿಷತ್ತು" ಎಂದರೆ ಭಾರತೀಯ ಕೃಷಿ ಸಂಶೋಧನಾ ಪರಿಷತ್ತು.

**3. ಉಪಕರ ವಿಧಿಸುವುದು.-** (1) ಭಾರತದಿಂದ ರಫ್ತು ಮಾಡುವ ಮತ್ತು ಅನುಸೂಚಿಯಲ್ಲಿ ಒಳಗೊಂಡಿರುವ ಎಲ್ಲಾ ವಸ್ತುಗಳ ಮೇಲೆ ಶೇಕಡಾ ಅರ್ಧದಷ್ಟು ಸೀಮಾ ಸುಂಕವನ್ನು ಮೌಲ್ಯಾನುಸಾರವಾಗಿ ವಿಧಿಸತಕ್ಕದ್ದು:

ಪರಂತು, ಅಂಥ ವಸ್ತುಗಳು ಭಾರತದಲ್ಲಿ ಉತ್ಪಾದನೆಯಾಗಿಲ್ಲವೆಂದು ಕಮೀಷನರಿಗೆ ಮನದಟ್ಟಾಗುವ ಹಾಗೆ ರುಜುವಾತುಪಡಿಸಿದಲ್ಲಿ ಅವುಗಳ ಮೇಲೆ ಸದರಿ ಸುಂಕವನ್ನು ವಿಧಿಸತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅನುಸೂಚಿಯಲ್ಲಿ ಒಳಗೊಂಡಿರುವ ಯಾವುವೇ ವಸ್ತುಗಳ ಮೇಲೆ ಸದರಿ ಸುಂಕವನ್ನು ವಿಧಿಸುವ ಉದ್ದೇಶಗಳಿಗಾಗಿ ಅವುಗಳ ಜಕಾತಿ ಮೌಲ್ಯಗಳನ್ನು ನಿಗದಿಪಡಿಸಬಹುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಜಕಾತಿ ಮೌಲ್ಯವನ್ನು ಬದಲಾಯಿಸಬಹುದು.

**4. ಅನುಸೂಚಿಯಿಂದ ವಸ್ತುಗಳನ್ನು ಹೊರತುಪಡಿಸುವ ಅಧಿಕಾರ.-** ಕೇಂದ್ರ ಸರ್ಕಾರವು ಪರಿಷತ್ತಿನೊಡನೆ ಪೂರ್ವ ಸಮಾಲೋಚನೆ ನಡೆಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಸ್ತುವು 3ನೇ ಪ್ರಕರಣದ ಮೂಲಕ ವಿಧಿಸಲಾಗಿರುವ ಸುಂಕಕ್ಕೆ ಒಳಪಡುವುದು ಕೊನೆಗೊಳ್ಳತಕ್ಕುದೆಂದು ನಿರ್ದೇಶಿಸಬಹುದು ಮತ್ತು ಆ ತರುವಾಯ ಆ ಅಧಿಸೂಚನೆಯು ಜಾರಿಯಲ್ಲಿರುವವರೆಗೂ ಆ ವಸ್ತುವು ಅನುಸೂಚಿಯಲ್ಲಿ ಒಳಗೊಂಡಿಲ್ಲವೆಂದು ಭಾವಿಸತಕ್ಕದ್ದು.

**5. ಉಪಕರದ ಮರುಪಾವತಿ ಮತ್ತು ಅದರಿಂದ ವಿನಾಯಿತಿ.-** ಕೇಂದ್ರ ರಾಜಸ್ವ ಮಂಡಲಿಗಳ ಅಧಿನಿಯಮ, 1963ರ ಮೇರೆಗೆ ರಚಿತವಾದ ಕೇಂದ್ರ ಉತ್ಪಾದನಾ ಮತ್ತು ಸೀಮಾ ಸುಂಕ ಮಂಡಲಿಯು, ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳ ಮೇಲೆ ಉಪಬಂಧ ಕಲ್ಪಿಸುವ ಸಂಬಂಧದಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ, ಎಂದರೆ,-

(ಎ) ವಸ್ತುಗಳನ್ನು ಭೂಮಾರ್ಗದ ಮೂಲಕ ರಫ್ತು ಮಾಡಿ, ಆ ತರುವಾಯ ಅವುಗಳನ್ನು ಭಾರತಕ್ಕೆ ಆಮದು ಮಾಡಿಕೊಂಡಿರುವಲ್ಲಿ, ಅವುಗಳ ಮೇಲೆ ವಿಧಿಸಿದ ಸುಂಕವನ್ನು ಮರುಪಾವತಿ ಮಾಡುವ ಬಗ್ಗೆ, ಮತ್ತು

(ಬಿ) ತರುವಾಯ ಭಾರತಕ್ಕೆ ಆಮದು ಮಾಡಿಕೊಳ್ಳಬೇಕಾದ ವಸ್ತುಗಳ ಮೇಲೆ ಸುಂಕವನ್ನು ಸಂದಾಯ ಮಾಡದೆ ಅವುಗಳನ್ನು ಭೂಮಾರ್ಗದ ಮೂಲಕ ರಫ್ತು ಮಾಡುವ ಬಗ್ಗೆ ಉಪಬಂಧ ಕಲ್ಪಿಸಲು ನಿಯಮಗಳನ್ನು ರಚಿಸಬಹುದು.

**5ಎ. ಸೀಮಾ ಸುಂಕ ಅಧಿನಿಯಮ, 1962ರ ಕೆಲವು ಉಪಬಂಧಗಳನ್ನು ಅನ್ವಯಿಸುವುದು.**- ಸುಂಕದ ಮರುಪಾವತಿಗೆ ಮತ್ತು ಅದರಿಂದ ವಿನಾಯಿತಿಗೆ ಸಂಬಂಧಿಸಿದ ಉಪಬಂಧಗಳೂ ಸೇರಿದಂತೆ ಸೀಮಾ ಸುಂಕ ಅಧಿನಿಯಮ, 1962ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು ಮತ್ತು ವಿನಿಯಮಗಳು, ಆ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡಬಹುದಾದ ಸುಂಕವನ್ನು ವಿಧಿಸುವ ಮತ್ತು ಅವುಗಳನ್ನು ಸಂಗ್ರಹಿಸುವ ಸಂಬಂಧದಲ್ಲಿ ಅನ್ವಯಿಸುವ ಹಾಗೆಯೇ ಅನುಸೂಚಿಯಲ್ಲಿರುವ ಎಲ್ಲಾ ವಸ್ತುಗಳ ಮೇಲೆ ಸೀಮಾ ಸುಂಕ ವಿಧಿಸುವುದಕ್ಕೆ ಮತ್ತು ಅವುಗಳನ್ನು ಸಂಗ್ರಹಿಸುವುದಕ್ಕೆ ಸಂಬಂಧಿಸಿ ಸಾಧ್ಯವಾದಷ್ಟುಮಟ್ಟಿಗೆ ಅನ್ವಯವಾಗತಕ್ಕದ್ದು.

**5ಬಿ. ದಂಡನೆಗಳು.**- (1) ಯಾರೇ ಆಗಲಿ,-

(ಎ) ಈ ಅಧಿನಿಯಮದ ಮೇರೆಗಿನ ಯಾವುದೇ ಸೀಮಾಸುಂಕವನ್ನು ಸಂದಾಯ ಮಾಡಲು ತಪ್ಪಿದರೆ; ಅಥವಾ

(ಬಿ) ಯಾವುದೇ ಮಾಹಿತಿಯನ್ನು ಒದಗಿಸುವುದು ಅವನ ಕರ್ತವ್ಯವಾಗಿದ್ದು ಅದನ್ನು ಹಾಗೆ ಒದಗಿಸಲು ವಿಫಲನಾದರೆ ಅಥವಾ ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವ ಅಥವಾ ನಿಜವಲ್ಲವೆಂದು ಅವನು ನಂಬುವ ಮಾಹಿತಿಯನ್ನು ಒದಗಿಸಿದರೆ, ಅಥವಾ

(ಸಿ) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಮೇರೆಗೆ ಕಮೀಷನರನು ಅಥವಾ ಇತರ ಅಧಿಕಾರಿಯು ತನ್ನ ಕರ್ತವ್ಯಗಳನ್ನು ನೆರವೇರಿಸುವಾಗ ಅವನನ್ನು ಅಡ್ಡಿಪಡಿಸಿದರೆ

– ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧದ ಅಧಿವಿಚಾರಣೆ ಮಾಡುವ ಯಾವುದೇ ನ್ಯಾಯಾಲಯವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಸ್ತುವಿನ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಮಾಡಲಾಗಿದೆ ಎಂದು ಅದಕ್ಕೆ ಮನದಟ್ಟಾದರೆ ಆ ವಸ್ತುವನ್ನು ಕೇಂದ್ರ ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅಂಥ ವಸ್ತುವನ್ನು ಒಳಗೊಂಡಿರುವಂಥ ಎಲ್ಲಾ ಪ್ಯಾಕೇಜುಗಳನ್ನು, ಕವರಿಂಗ್‌ಗಳನ್ನು ಅಥವಾ ಪಾತ್ರೆಗಳನ್ನು ಮತ್ತು ಅಂಥ ವಸ್ತುವನ್ನು ಸಾಗಿಸಲು ಬಳಸಿದ ಪ್ರತಿಯೊಂದು ಹಡಗು ಅಥವಾ ಇತರ ವಾಹನವನ್ನು ಕೇಂದ್ರ ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದೂ ಸಹ ನಿರ್ದೇಶಿಸಬಹುದು.

**6. ಪರಿಷತ್ತಿಗೆ ಉಪಕರವನ್ನು ಸಂದಾಯ ಮಾಡುವುದು ಮತ್ತು ಪರಿಷತ್ತಿನಿಂದ ಅಂಥ ಉಪಕರದ ವೆಚ್ಚ.**- (1) ಈ ಅಧಿನಿಯಮದ ಮೇರೆಗೆ ವಿಧಿಸಲಾದ ಸುಂಕದ ಉತ್ಪತ್ತಿಯಿಂದ ಸಂಗ್ರಹಣಾ ವೆಚ್ಚವನ್ನು ಕಳೆದು ಉಳಿದುದನ್ನು ಪರಿಷತ್ತಿಗೆ ಸಂದಾಯ ಮಾಡತಕ್ಕದ್ದು.

(2) ಹಾಗೆ ಉಳಿಯತಕ್ಕ ಮೊಬಲಗನ್ನು ಕೇಂದ್ರ ಸರ್ಕಾರವು ಆರು ತಿಂಗಳಿಗೆ ಹೆಚ್ಚಿಲ್ಲದ ಮಧ್ಯಂತರಗಳಲ್ಲಿ ಪರಿಷತ್ತಿಗೆ ಸಂದಾಯ ಮಾಡತಕ್ಕದ್ದು.

(3) ಪರಿಷತ್ತಿಗೆ ಹಾಗೆ ಸಂದಾಯ ಮಾಡಿದ ಹಣವನ್ನು, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಚಿಸುವ ನಿಯಮಗಳ ಮೂಲಕ ವಿಧಿಸಬಹುದಾದಂಥ ಪರಿಮಿತಿಗಳಿಗೆ ಒಳಪಟ್ಟು ವೆಚ್ಚ ಮಾಡತಕ್ಕದ್ದು.

**7. ಸ್ಥಾಯೀ ಹಣಕಾಸು ಸಮಿತಿ.**- (1) ಪರಿಷತ್ತು ಸ್ಥಾಯೀ ಹಣಕಾಸು ಸಮಿತಿಯೊಂದನ್ನು ರಚಿಸತಕ್ಕದ್ದು ಮತ್ತು ಸಂಸತ್ತಿನ ಸದಸ್ಯರಲ್ಲಿ ಒಬ್ಬರನ್ನು ಅದರ ಆಡಳಿತ ಮಂಡಲಿಗೆ ಸದಸ್ಯನನ್ನಾಗಿ ಆರಿಸಿಕೊಳ್ಳತಕ್ಕದ್ದು, ಮತ್ತು ಒಬ್ಬ ಸದಸ್ಯನು ಕೇಂದ್ರ ಸರ್ಕಾರವು ನೇಮಕ ಮಾಡುವ ಅಧಿಕಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಸ್ಥಾಯೀ ಹಣಕಾಸು ಸಮಿತಿಯ ರಚನೆ, ಕರ್ತವ್ಯ ಮತ್ತು ಕಾರ್ಯವಿಧಾನವನ್ನು ಪರಿಷತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ನಿರ್ಧರಿಸುವಂತಹ ರೀತಿಯಲ್ಲಿ ವಿನಿಯಮಿಸತಕ್ಕದ್ದು.

**8. ಮೀಸಲು ನಿಧಿ.**- ಪರಿಷತ್ತು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗನುಸಾರವಾಗಿ ಒಂದು ಮೀಸಲು ನಿಧಿಯನ್ನು ಸೃಜಿಸತಕ್ಕದ್ದು ಮತ್ತು ಅದನ್ನು ನಿರ್ವಹಿಸಿಕೊಂಡು ಬರತಕ್ಕದ್ದು.

**9. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಪರಿಷತ್ತಿನೊಡನೆ ಸಮಾಲೋಚಿಸಿದ ತರುವಾಯ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಲಾದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ 6ನೇ ಪ್ರಕರಣದ ಮೇರೆಗೆ ಪರಿಷತ್ತಿಗೆ ಸಂದಾಯ ಮಾಡಿದ ಹಣವನ್ನು ವೆಚ್ಚ ಮಾಡುವುದನ್ನು ನಿಯಂತ್ರಿಸಲು ಮತ್ತು 8ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಮೀಸಲು ನಿಧಿಯ ಸೃಜನೆ, ನಿರ್ವಹಣೆ ಮತ್ತು ವ್ಯವಸ್ಥಾಪನೆಗೆ ಉಪಬಂಧ ಕಲ್ಪಿಸಲು ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಹಾಗೆ ಇರಿಸಲಾದ ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದರೂ ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

## ಅನುಸೂಚಿ

**(3ನೇ ಪ್ರಕರಣ ನೋಡಿ)**

1. ಮೂಳೆ
2. ಬಿರುಗೂದಲು
3. ಬೆಣ್ಣೆ
4. ಅಕ್ಕಿ ಮತ್ತು ಗೋಧಿಯನ್ನು ಹೊರತುಪಡಿಸಿ ಇತರ ಧಾನ್ಯಗಳು.
5. ಔಷಧಿಗಳು
6. ಬ್ರಷ್ ತಯಾರಿಕೆಗೆ ಬಳಸುವ ನಾರು
7. ಮೀನು
8. ಹಣ್ಣು
9. ತುಪ್ಪ
10. ಕಚ್ಚಾ ತೊಗಲು
11. ಗೊಬ್ಬರ
12. ಹಿಂಡಿ
13. ದ್ವಿದಳ ಧಾನ್ಯ
14. ಬೀಜಗಳು
15. ಕಚ್ಚಾ ಚರ್ಮ
16. ಸಾಂಬಾರ ಪದಾರ್ಥಗಳು
17. ಸಂಸ್ಕರಿಸದ ತಂಬಾಕು
18. ತರಕಾರಿ
19. ಗೋಧಿ
20. ಗೋಧಿಹಿಟ್ಟು
21. ಚೊಕ್ಕಟಗೊಳಿಸಿದ ಅಥವಾ ಚೊಕ್ಕಟಗೊಳಿಸದ ಅಥವಾ ಎಕ್ಕಿದ ಅಥವಾ ಎಕ್ಕದಿರುವ ಕುರಿ ಅಥವಾ ಟಗರಿನ ಉಣ್ಣೆ ಮತ್ತು ಪ್ರಾಣಿಯ ಕೂದಲು

* * *